ಕರ್ನಾಟಕ ವಿಧಾನಸಭೆ

ಬುಧವಾರ 24ನೇ ಜುಲೈ 2002ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪ(ರವರು) ಪೀಠವನ್ನು ಅಲಂಕರಿಸಿದ್ದರು.

1) ಅಧ್ಯಕ್ಷರ ಅಪ್ಪಣೆ ಮೇರೆಗೆ - ಶ್ರೀ ಯು.ಆರ್. ಸಭಾಪತಿರವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಪತ್ರಿಕೆಯಲ್ಲಿ ವರದಿಯಾಗಿರುವ ವಿಚಾರ.

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ವಿಶೇಷವಾದ ವಿಚಾರವನ್ನು ತಮ್ಮ ಮುಂದೆ ಮಂಡಿಸಲಿಕ್ಕೆ ಇಚ್ಛಿಪಡುತ್ತೇನೆ, ನಮ್ಮ ಸಹಪಾಠಿಯಾಗಿರುವ ಮಾನ್ಯ ಶಾಸಕರಾದ ಸಭಾಪತಿಯವರು ರಾಜೀನಾಮೆ ಕೊಟ್ಟಿದ್ದಾರೆನ್ನುವ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ತಾವು ದಯಮಾಡಿ ಅಂಥದ್ದಕ್ಕೆ ಅವಕಾಶ ಕೊಡಬಾರದು, ಏಕೆಂದರೆ, ಸದನದಲ್ಲಿ ಅವರು ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದರು, ಉತ್ತಮ ಕೆಲಸಗಾರರು, ಏಕೆ ಏನಾಗಿದೆ ಎಂಬುದು ಗೊತ್ತಿಲ್ಲ. ಅವರು ರಾಜೀನಾಮೆ ಕೊಡಲಿಕ್ಕೆ ಯಾವ ಒತ್ತಡಗಳು ಬಂದಿವೆ? ಅವರ ಮನೋಸ್ಥಿತಿ ಆ ರೀತಿ ಏಕೆ ಆಯಿತು ಎಂಬುದು ಗೊತ್ತಿಲ್ಲ, ಬಹುಶಃ ತಮಗೆ ರಾಜೀನಾಮೆ ಪತ್ರ ಬಂದಿದೆ. ತಾವು ಅದನ್ನು ಅಂಗೀಕರಿಸಲಿಲ್ಲ ಎಂಬುದಾಗಿ ಪತ್ರಿಕೆಗಳಲ್ಲಿ ಬಂದಿದೆ, ನಮಗೂ ಕೂಡ ನಮ್ಮ ಸಹಪಾಠಿಯ ಬಗ್ಗೆ ಆಸಕ್ತಿ ಇದೆ, ಅದು ಏನಾಗಿದೆ? ಏಕೆ ಆಗಿದೆ? ತಮ್ಮನ್ನು ಭೇಟಿ ಮಾಡಿದ್ದಾರೆಯೇ? ಏಕೆ ರಾಜೀನಾಮೆ ಕೊಟ್ಟಿದ್ದಾರೆ? ಅವರು ಯಾವ ಪರಿಸ್ಥಿತಿಯಲ್ಲಿದ್ದಾರೆ? ಇವೆಲ್ಲವನ್ನೂ ಸದನಕ್ಕೆ ತಾವು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಸಭಾಪತಿಯವರು ರಾಜೀನಾಮೆ ಕೊಟ್ಟಿದ್ದರ ಬಗ್ಗೆ ನಾವೂ ಕೂಡ ಪತ್ರಿಕೆಗಳಲ್ಲಿ ಓದಿದ್ದೇವೆ, ತಾವೂ ಕೂಡ ಪತ್ರಿಕೆಗಳಿಗೆ ಹೇಳಿದ್ದೀರಿ, ನಮ್ಮ ಉದ್ದೇಶ ಏನೆಂದರೆ, ಮಾನ್ಯ ಸದಸ್ಯರು ಏಕೆ ಮತ್ತು ಯಾವ ಕಾರಣಕ್ಕೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆಂಬುದು ಈ ಸದನಕ್ಕೆ ಗೊತ್ತಾಗಬೇಕು. ಈ ಸದನದ ಸದಸ್ಯರು ರಾಜೀನಾಮೆ ಕೊಟ್ಟರೆ ಅದರ ಪರಿಣಾಮಗಳು ಬಹಳ ಇರುತ್ತದೆ, ಅದಕ್ಕಾಗಿ ಮಾನ್ಯ ಸಭಾಧ್ಯಕ್ಷರು ಈ ಸದನಕ್ಕೆ ತಿಳಿಸಬೇಕಾಗುತ್ತದೆ ಮತ್ತು ಅವರನ್ನು ಕರೆದು ಇದರ ಬಗ್ಗೆ ವಿಚಾರಣೆ ಮಾಡುತ್ತೇನೆಂದು ತಾವು ಹೇಳಿದ್ದೀರಿ, ಆದರೆ ಅವರು ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದಾರೆಂದು ಈ ಸದನಕ್ಕೆ ತಿಳಿಸಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಸಭಾಪತಿಯವರು ಖುದ್ದಾಗಿ ನನ್ನ ಕೈಗೆ ರಾಜೀನಾಮೆ ಪತ್ರವನ್ನು ಕೊಟ್ಟಿಲ್ಲ. ನೆನ್ನೆ ದಿವಸ ಬೆಳಿಗ್ಗೆ 10 ಗಂಟೆಗೆ ನನ್ನ ಮನೆಗೆ ಬಂದು ರಾಜೀನಾಮೆ ಪತ್ರ ಕೊಟ್ಟು ಹೊರಟು ಹೋಗಿದ್ದಾರೆ. ನಾನು ಸಂಜೆ ಇಲ್ಲಿಂದ ಮನೆಗೆ ಹೋದ ಮೇಲೆ ಅವರ ರಾಜೀನಾಮೆ ಪತ್ರವನ್ನು ನೋಡಿದೆ. ನಾನು ರಾಜೀನಾಮೆ ಕೊಡುತ್ತಿದ್ದೇನೆ, ತಾವು ದಯವಿಟ್ಟು ಒಪ್ಪಿಕೊಳ್ಳಬೇಕೆಂದು ಅವರ ಪರ್ಸನಲ್ ಲೆಟರ್‌ನಲ್ಲಿಯೇ ಬರೆದು ಕೊಟ್ಟಿದ್ದಾರೆ. ರಾಜೀನಾಮೆ ಯಾವ ಕಾರಣಕ್ಕಾಗಿ ಕೊಡುತ್ತಿದ್ದೇನೆ ಎನ್ನತಕ್ಕಂಥದನ್ನು ಅದರಲ್ಲಿ ಬರೆದಿಲ್ಲ. ಆದರೆ, 10ನೇ ಷೆಡ್ಯೂಲ್ ಪ್ರಕಾರ it is my duty to safeguard the interest of the Members

since I am the custodian of this Hose ರಾಜೀನಾಮೆಯನ್ನು ಅವರು ಕೋಪದಲ್ಲಿ ಕೊಟ್ಟಿದ್ದಾರೆಯೇ ಅಥವಾ ಇನ್ಯಾವ ಕಾರಣಕ್ಕಾಗಿ ಕೊಟ್ಟಿದ್ದಾರೆಂದು ತಿಳಿದುಕೊಳ್ಳುವುದಕ್ಕೆ ಅವರನ್ನು ಕರೆದು ಮಾತನಾಡುತ್ತೇನೆ. ಒಂದರೆಡು ದಿವಸದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಒಂದು ವೇಳೆ ಅವರು ವಾಪಸ್ಸು ತೆಗೆದುಕೊಳ್ಳಬಹುದೇನೋ, ಇದು ಯಾರಿಗೆ ಗೊತ್ತಿದೆ?

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾಪತಿಯವರ ನಿರ್ವಹಣೆ ಸದನದ ಒಳಗೆ ಮತ್ತು ಹೊರಗೆ ಯಾವ ರೀತಿಯಾಗಿ ನಡೆದುಕೊಳ್ಳುತ್ತಾರೆ ಎನ್ನತಕ್ಕಂಥದ್ದು ತಮಗೂ ಸಹ ಗೊತ್ತಿದೆ. ತಾವೂ ಕೂಡ ಅವರ ಕ್ಷೇತ್ರಕ್ಕೆ ಭೇಟಿ ನೀಡಿದ್ದೀರಿ. ಆದ್ದರಿಂದ, ಇಂಥ ಸಂದರ್ಭದಲ್ಲಿ ಅವರನ್ನು ಕೈಬಿಡಬಾರದು. ಅವರ ಮನಸ್ಸು ನೊಂದಿದ್ದರೆ, ಅವರಿಗೆ ಸಾಂತ್ವನ ಹೇಳಿ ಅವರ ಮನವೊಲಿಸತಕ್ಕಂಥ ಕೆಲಸ ಮಾಡಬೇಕು. ಅವರು ಮತ್ತೆ ಶಾಸಕರಾಗಿ ಮುಂದುವರಿಯುವುದಕ್ಕೆ ಅವಕಾಶವನ್ನು ಕಲ್ಪನೆ ಮಾಡಿಕೊಡಬೇಕೆಂದು ನಮ್ಮೆಲ್ಲರ ಅಭಿಪ್ರಾಯವಾಗಿದೆ.

ಅಧ್ಯಕ್ಷರು : ಆಯಿತು, ಮಾಡೋಣ,

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಪ್ರಕಾರ ರಾಜೀನಾಮೆ ಪತ್ರದಲ್ಲಿ ಕಾರಣಗಳನ್ನು ಕೊಡಬೇಕಾಗಿಲ್ಲ. ಕೇವಲ ರಾಜೀನಾಮೆಯನ್ನು ಮಾತ್ರ ಬರೆದಿರುತ್ತಾರೆ. ಈ ರೀತಿಯಾಗಿ ಅವರೂ ಸಹ ಬರೆದಿದ್ದಾರೆ. ಅವರು ಬಹಳ ಚೆನ್ನಾಗಿ ಈ ಸಭೆಯಲ್ಲಿ ಭಾಗವಹಿಸಿದ್ದಾರೆ. ಹಾಗೆಯೇ ಒಬ್ಬ ಮಾದರಿ ಶಾಸಕರಾಗಿ ವರ್ತನೆ ಮಾಡಿದ್ದಾರೆ. ಆದ್ದರಿಂದ, ಅವರ ಮನವೊಲಿಸತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತಾ, ಅವರು ಕೊಟ್ಟಿರತಕ್ಕಂಥ ರಾಜೀನಾಮೆ ಪತ್ರವನ್ನು ದಯವಿಟ್ಟು ಸ್ವೀಕಾರ ಮಾಡಬಾರದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ರಾಜೀನಾಮೆಯನ್ನು ನಾನು ಇನ್ನೂ ಸ್ವೀಕಾರ ಮಾಡಿಲ್ಲ. ಅವರು ಪುನಃ ನನ್ನನ್ನು ಭೇಟಿ ಮಾಡುವವರೆಗೂ ಅವರ ರಾಜೀನಾಮೆ ಪತ್ರವನ್ನು ಸ್ವೀಕಾರ ಮಾಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ತಾವು ಮನವೊಲಿಸುವುದರ ಜೊತೆಗೆ ಮಾನ್ಯ ನಾಡಗೌಡರು ಮತ್ತು ಮಾನ್ಯ ಕರಿಯಣ್ಣನವರು ಈ ಕೆಲಸ ಮಾಡುವುದಕ್ಕೆ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದಾರೆಂದು ನನಗನ್ನಿಸುತ್ತದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿರತಕ್ಕಂಥ ಒಬ್ಬ ಶಾಸಕರು ತಮ್ಮ ಮನಸ್ಸಿಗೆ ತುಂಬಾ ಬೇಜಾರಾಗಿ ರಾಜೀನಾಮೆ ಕೊಟ್ಟಾಗ ಅವರ ಮನವೊಲಿಸತಕ್ಕಂಥದ್ದು ಈ ಸದನದ ಎಲ್ಲಾ ಸದಸ್ಯರ ಧರ್ಮವಾಗಿದೆ. ಮೇಲಾಗಿ ಈ ಸದನದಲ್ಲಿ ಮತ್ತು ಹೊರಗೆ ಹಾಗೂ ರಾಜ್ಯದಲ್ಲಿ ಜನಗಳ ಬಗ್ಗೆ ಮಾನ್ಯ ಸಭಾಪತಿಯವರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದರು. ಆದ್ದರಿಂದ, ಅವರನ್ನು ತಮ್ಮ ಛೇಂಬರಿಗೆ ದಯವಿಟ್ಟು ಕರೆಸಿ ಅವರ ಮನವೊಲಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಯಾವ ಕಾರಣಕ್ಕಾಗಿ ಅವರು ರಾಜೀನಾಮೆ ಕೊಟ್ಟಿದ್ದಾರೆ ಎನ್ನತಕ್ಕಂಥದ್ದು ಈ ಸದನಕ್ಕೆ ಗೊತ್ತಾಗಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಅವರ ಪಕ್ಷದವರಿಂದಲೇ ಅವರ ಮನಸ್ಸು ನೊಂದಿದೆ. ಉಡುಪಿ ಜಿಲ್ಲಾ ಪಂಚಾಯತ್‌ನಲ್ಲಿ ಇವರ ಮೇಲೆ ಖಂಡನಾ ನಿರ್ಣಯವನ್ನು ಇವರ

ಪಾರ್ಟಿಯವರೇ ಮಾಡಿದ್ದಾರೆ. ಇದರಿಂದ, ಅವರ ಮನಸ್ಸು ನೊಂದಿರಬಹುದು. ಇದಕ್ಕೆ ಸಂಬಂಧಪಟ್ಟಂತೆ ನಾವು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟಂತೆ ಚರ್ಚೆ ಬೇಡ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ (ಬೀರೂರು) : ಮಾನ್ಯ ಅಧ್ಯಕ್ಷರೆ, ನಾವು ಅವರ ಮನವೊಲಿಸುವುದಕ್ಕೆ ತಯಾರಿದ್ದೇವೆ. ಆದರೆ, ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿದ್ದಾರೆ ಎನ್ನತಕ್ಕಂಥದ್ದು ತಿಳಿಯಬೇಕು.

ಅಧ್ಯಕ್ಷರು : ಅದನ್ನು ನನಗೆ ಬಿಡಿ. ಅವರನ್ನು ಇವತ್ತು ಕರೆಸಿ ಮಾತನಾಡುತ್ತೇನೆ. ನನ್ನ ಕೈಯಲ್ಲಿ ಅವರ ಮನವೊಲಿಸುವುದಕ್ಕೆ ಆಗದೇ ಇದ್ದರೆ, ನಿಮಗೆಲ್ಲರಿಗೂ ಹೇಳುತ್ತೇನೆ. ಸ್ವಲ್ಪ ಮನವೊಲಿಸಿ ಎಂದು ಈಗ ಪ್ರಶ್ನೋತ್ತರ ವೇಳೆ. ಇವತ್ತಿನ 15 ಪ್ರಶ್ನೆಗಳಿಗೂ ಸಹ ಉತ್ತರ ಬಂದಿದೆ. ಇದರಲ್ಲಿ ಐದಾರು ಜನರಲ್ ಪ್ರಶ್ನೆ ಇವೆ. ಇನ್ನು ಉಳಿದವು ವೈಯಕ್ತಿಕ ಪ್ರಶ್ನೆಗಳಾಗಿವೆ. ಯಾರು ಪ್ರಶ್ನೆಯನ್ನು ಕೇಳಿರುತ್ತಾರೆ. ಅವರು ಇದಕ್ಕೆ ಸಂಬಂಧಪಟ್ಟಂತೆ ಎರಡು ಪ್ರಶ್ನೆಗಳನ್ನು ಕೇಳಿ. ಇದಕ್ಕೆ ನನದೇನೂ ಆಭ್ಯಂತರವಿಲ್ಲ. ಸುಮ್ಮನೆ ಮೂರ್ನಾಲ್ಕು ಪ್ರಶ್ನೆ ಕೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಕೃಷ್ಣರಾಜಪೇಟೆ ಮತಕ್ಷೇತ್ರದಲ್ಲಿರುವ ಸರ್ಕಾರಿ ಪ್ರಥಮದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಒದಗಿಸುವುದು

166(1412) - ಶ್ರೀ ಚಂದ್ರಶೇಖರ್ ಕೆ.ಬಿ. (ಕೆ.ಆರ್. ಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೃಷ್ಣರಾಜಪೇಟೆಯ ಮತಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸುಮಾರು 800 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು 12 ವರ್ಷಗಳಿಂದಲೂ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಸ್ವಂತ ಕಟ್ಟಡಕ್ಕೆ ನಿವೇಶನ ಮಂಜೂರು ಆಗಿದೆಯೆ; ಕಟ್ಟಡ ನಿರ್ಮಾಣಕ್ಕೆ ಹಣ ಮಂಜೂರು ಮಾಡಲಾಗಿದೆಯೆ;

3) ಈ ವರ್ಷ ವಿಜ್ಞಾನ ವಿಭಾಗ ಪ್ರಾರಂಭವಾಗಿದ್ದು ಉಪನ್ಯಾಸಕರುಗಳ ಹುದ್ದೆ ಮಂಜೂರು ಮಾಡಿ ನೇಮಿಸಲಾಗಿದೆಯೇ?

ಶ್ರೀ ಡಾ।। ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು

ಆ) ಇಲ್ಲ ಕಾಲೇಜಿನ ಕಟ್ಟಡಕ್ಕೆ ನಿವೇಶನ ದೊರಕದ ಕಾರಣ ಕಟ್ಟಡ, ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕೆ.ಆರ್. ಪೇಟೆ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನ ವಿಭಾಗವನ್ನು ಪ್ರಾರಂಭಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ವಿಜ್ಞಾನ ವಿಭಾಗ ಪ್ರಾರಂಭವಾದ ನಂತರ ಉಪನ್ಯಾಸಕರನ್ನು ರೀಡಿಪ್ಲಾಯ್‌ಮೆಂಟ್ ಮುಖಾಂತರ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು.